ವಿವಿಧ ಸಮುದಾಯಗಳು ಕೂಡಿ ಬಾಳುವ ಬದುಕು ಎಲ್ಲಕ್ಕಿಂತ ಮುಖ್ಯ ಎನ್ನುವ ತತ್ತ್ವಕ್ಕೆ, ನಮ್ಮ ಸಮಾಜ ಒಪ್ಪಿಗೆಯ ಮುದ್ರೆಯನ್ನು ಎಂದೋ ಹಾಕಿದೆ. 'ಸರ್ವಜನಾಂಗದ ಶಾಂತಿಯ ತೋಟ' ಎನ್ನುವ ರೂಪಕದಿಂದ ಸತ್ವವನ್ನು ಪಡೆದು, ಎಂಥ ರುದ್ರ ಸಮಯದಲ್ಲೂ ಮನುಷ್ಯ ಸಂಬಂಧಗಳು ನಶಿಸದಹಾಗೆ ಕಾಪಾಡಿಕೊಂಡು ಬರುತ್ತಿದೆ. ಬಹುಸಂಸ್ಕೃತಿಯನ್ನು ಬೆಸೆಯುವ ಜನಪದ ಕಲೆ, ಜಾತ್ರೆ, ರಂಗಭೂಮಿ, ಧಾರ್ಮಿಕ ಮತ್ತು ಆಧ್ಯಾತ್ಮಿಕದ ಹತ್ತಾರು ಆಚರಣೆಗಳು ಮತ್ತು ಸಾಹಿತ್ಯ ಚಿಂತನೆಗಳು ನಮ್ಮ ಸಮಾಜದಲ್ಲಿ ಹಾಸುಹೊಕ್ಕಾಗಿವೆ. ಮೇಲು ನೋಟಕ್ಕೆ ಇವೆಲ್ಲಾ ಪ್ರತ್ಯೇಕವಾಗಿ ಕಂಡರೂ, ಆಳದಲ್ಲಿ ಏಕತೆಯ ಬೇರುಗಳನ್ನು ಗಟ್ಟಿಗೊಳಿಸುವುದರಲ್ಲೇ ಕಾರ್ಯೋನ್ಮುಖವಾಗಿರುತ್ತವೆ. ಸಣ್ಣ ಸಣ್ಣ ಆಚರಣೆಗಳು ಸಾಮುದಾಯಿಕ ಬದುಕಿನ ಸಂಕಷ್ಟಗಳನ್ನು ಮೃದುಗೊಳಿಸುತ್ತವೆ ಎಂಬ ನಂಬಿಕೆ ಸಮುದಾಯದ ಮನಸ್ಸಿನಲ್ಲಿ ಆಳವಾಗಿ ಬೇರೂರಿದೆ.

ಭಾವಾತಿರೇಕವನ್ನು ಆಲಂಗಿಸಿಕೊಂಡಿದ್ದ ನಮ್ಮ ಕೇರಿ ಒಂದು ಕೂಡು ಕುಟುಂಬದಂತೆ ಇತ್ತು. ಇನ್ನೊಬ್ಬರ ದೇಹಕ್ಕೆ ಆದ ಗಾಯವನ್ನು, ತನ್ನದೇ ದೇಹಕ್ಕಾದ ಗಾಯವೆಂಬಂತೆ ಭಾವಿಸಿ ಅನುಕಂಪಿಸುವವರ ಸಂಖ್ಯೆ ನಮ್ಮಲ್ಲಿ ಹೇರಳವಾಗಿತ್ತು. ಅದರಲ್ಲೂ ಮದುವೆ ಮತ್ತು ಸಾವಿನ ಸಂದರ್ಭಗಳಲ್ಲಿ

